ಜಿಲ್ಲಾ ದಂಡಾಧಿಕಾರಿಗಳು, ಹಾಸನ ಜಿಲ್ಲೆ : ಹಾಸನ
ಅವರ ಕಚೇರಿಯ ನಡವಳಿಕೆಗಳು

---

ಅಧಿಸೂಚನೆ ಸಂಖ್ಯೆ : ಆಯುಧ-500-94:

ವಿಷಯ: ಸಾರ್ವತ್ರಿಕ ವಿಧಾನಸಭಾ ಚುನಾವಣೆ – 1994 : ಬಂದೂಕ ಪರವಾನಿಗೆಗಳನ್ನು ತಾತ್ಕಾಲಿಕವಾಗಿ ನಿಲಂಬನೆಗೊಳಿಸಿರುವುದು.

ಉಲ್ಲೇಖ: ಭಾರತ ಸರ್ಕಾರದ ಚುನಾವಣಾ ಆಯೋಗದ ಆದೇಶ ಸಂಖ್ಯೆ :464-ಎಲ್ ಅಂಡ್ ಓ-ಇಎಸ್-021--94: 7193- ದಿನಾಂಕ 21-9-94.

:-:-:

<u>ಪ್ರ ಸ್ತಾ ವ ನೆ</u>

ಉಲ್ಲೇಖ 1)ರ ಭಾರತ ಚುನಾವಣಾ ಆಯೋಗದ ಆದೇಶದ ಮೇರೆಗೆ ಹಾಸನ ಜಿಲ್ಲೆಯಲ್ಲಿ ವೈಯುಕ್ತಿಕ ಪರವಾನಿಗೆ ಪಡೆದು ಬಂದೂಕ ಹೊಂದಿರುವವರ ಎಲ್ಲಾ ಬಂದೂಕ ಪರವಾನಿಗೆಗಳನ್ನು ತಾತ್ಕಾಲಿಕವಾಗಿ ನಿಲಂಬನೆಗೊಳಿಸಿ, ಪರವಾನಿಗೆಗಳಲ್ಲಿ ಹೊಂದಿರತಕ್ಕ ಬಂದೂಕುಗಳನ್ನು ಸಂಬಂಧಿಸಿದ ಆರಕ್ಷಕ ಠಾಣೆಗಳಲ್ಲಿ ಡಿಪಾಜಿಟ್ ಮಾಡಲು ದಿನಾಂಕ 12-10-94:ರಂದು ಆದೇಶಿಸಲಾಗಿತ್ತು. ಚುನಾವಣಾ ಆಯೋಗದ ಆದೇಶದಲ್ಲಿ ವಿಧಾನಸಭಾ ಚುನಾವಣೆ ಫಲಿತಾಂಶ ಘೋಷಣೆಯಾದ ಒಂದು ವಾರದವರೆಗೆ ಬಂದೂಕುಗಳನ್ನು ಡಿಪಾಜಿಟ್ ಮಾಡತಕ್ಕದ್ದೆಂದು ನಿರ್ದೇಶಿಸಿರುತ್ತೆ. ಈ ನಿರ್ಬಂಧನೆ ದಿನಾಂಕ 16-12-94:ರವರೆಗೆ ಜಾರಿಯಲ್ಲಿರುತ್ತದೆ. ಡಿಪಾಜಿಟ್‌ನಲ್ಲಿಟ್ಟಿರುವ ಬಂದೂಕುಗಳನ್ನು ಬಿಡುಗಡೆ ಮಾಡಲು ಕೋರಿ ಪರವಾನಿಗೆದಾರರುಗಳಿಂದ ಅರ್ಜಿಗಳು ಬರುತ್ತಿರುವುದರಿಂದ – ಈ. ಕೆಳಕಂಡಂತೆ ಆದೇಶಿಸಿದೆ :

---

ಆ ದೇ ಶ

---

ಮಹೇಂದ್ರ ಜೈನ್, ಐ.ಎ.ಎಸ್., ಜಿಲ್ಲಾ ದಂಡಾಧಿಕಾರಿ, ಹಾಸನ ಜಿಲ್ಲೆ, ಹಾಸನ : ಆದ ನಾನು ಆಯುಧ ಕಾಯಿದೆ ಕಲಂ 17(3)(ಬಿ)- ಮೇರೆಗೆ ದಿನಾಂಕ 12-10-94:ರಲ್ಲಿ ಬಂದೂಕ ಪರವಾನಿಗೆಗಳನ್ನು ತಾತ್ಕಾಲಿಕವಾಗಿ ನಿಲಂಬನೆಗೊಳಿಸಿ ಬಂದೂಕ ಡಿಪಾಜಿಟ್ ಮಾಡುವಂತೆ ಆದೇಶಿಸಿರುವುದನ್ನು ದಿನಾಂಕ 16-12-94:ರವರೆಗೆ ಮಾತ್ರ ಜಾರಿಯಲ್ಲಿರತಕ್ಕದ್ದೆಂದು ಈ ಮೂಲಕ ಆದೇಶಿಸಿದೆ. ಅಂತೆಯೇ ದಿನಾಂಕ 16-12-94:ರ ನಂತರ ಡಿಪಾಜಿಟ್‌ನಲ್ಲಿ ಇಟ್ಟಿರತಕ್ಕ ಬಂದೂಕಗಳನ್ನು ಸಂಬಂಧಪಟ್ಟವರಿಗೆ ವಾಪಸ್ ಮಾಡಲು ನಿರ್ದೇಶಿಸಿದೆ.

ಜಿಲ್ಲಾ ದಂಡಾಧಿಕಾರಿಗಳು,
ಹಾಸನ ಜಿಲ್ಲೆ : ಹಾಸನ.

ನಕಲನ್ನು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ :-

1) ಆರಕ್ಷಕ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ
2) ಅಪರ ಆರಕ್ಷಕ ಅಧೀಕ್ಷಕರು, ಹಾಸನ :ಅರಸೀಕೆರೆ : ಹೊಳೇನರಸೀಪುರ.
3) ಆರಕ್ಷಕ ವೃತ್ತನಿರೀಕ್ಷಕರು, ಹಾಸನ ನಗರ : ಅರಸೀಕೆರೆ : ಚ.ರಾ.ಪಟ್ಟಣ : ಹೊಳೇನರಸೀಪುರ : ಸಕಲೇಶಪುರ.
4) ಉಪವಿಭಾಗಾಧಿಕಾರಿಗಳು, ಹಾಸನ : ಸಕಲೇಶಪುರ
5) ಜಿಲ್ಲೆಯ ಎಲ್ಲಾ ತಾಲ್ಲೂಕ ತಹಸಿಲ್ದಾರರು
6) ಆರಕ್ಷಕ ಉಪನಿರೀಕ್ಷಕರು, ಹಾಸನ ನಗರ : ಗ್ರಾಮಾಂತರ – ಅರಸೀಕೆರೆ ನಗರ:ಗ್ರಾಮಾಂತರ – ಬಾಣಾವರ, ಚನ್ನರಾಯಪಟ್ಟಣ, ನುಗ್ಗೇಹಳ್ಳಿ, ಹೊಳೇನರಸೀಪುರ, ಅರಕಲಗೂಡು, ಕೊಣನೂರು, ಆಲೂರು ಸಕಲೇಶಪುರ – ನಗರ:ಗ್ರಾಮಾಂತರ, ಯಸಳೂರು, ಅರೇಹಳ್ಳಿ, ಬೇಲೂರು, ಶ್ರವಣಬೆಳಗೊಳ.
7) ಜಿಲ್ಲೆಯ ಎಲ್ಲಾ ಆಯುಧ ವ್ಯಾಪಾರಿಗಳಿಗೆ –

ಎಜಿಪಿ-